# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 485
ಸದಸ್ಯರ ಹೆಸರು : ಶ್ರೀ ಗೋವಿಂದ ರಾಜು
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 16.09.2021.
ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಕೆಲವರು ಕೆಲವು ಸಂಘ ಸಂಸ್ಥೆಗಳ ಹೆಸರುಗಳನ್ನು ಹೇಳಿಕೊಂಡು ಸರ್ಕಾರಿ ಅಧಿಕಾರಿಗಳಿಗೆ, ಉದ್ದಿಮೆದಾರರಿಗೆ, ರೈತರು ಹಾಗೂ ಕೋಳಿ ಸಾಕಾಣಿದಾರರಿಗೆ ಅನಗತ್ಯ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಈ ಸಂಘ ಸಂಸ್ಥೆಗಳವರು ಮೇಲ್ಕಂಡವರಿಗೆ ಅನಗತ್ಯ ತೊಂದರೆ ನೀಡುವುದುದರಿಂದ ಸರ್ಕಾರ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತಿರುವುದು ನಿಜವೇ ಹಾಗಿದ್ದಲ್ಲಿ ಇಂತಹ ಸಂಘ ಸಂಸ್ಥೆಗಳನ್ನು ನಿಯಂತ್ರಿಸಲು ಸರ್ಕಾರ ಕ್ರಮಕೈಗೊಳ್ಳುವುದೇ; | ಈ ವಿಷಯವಾಗಿ ಬೆಂಗಳೂರು ನಗರ, ದಾವಣಗೆರೆ, ಬಳ್ಳಾರಿ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಒಟ್ಟು 7 ಪ್ರಕರಣಗಳು ದಾಖಲಾಗಿರುತ್ತದೆ. (ಅನುಬಂಧ ಅ ನಲ್ಲಿ ಪ್ರಕರಣಗಳ ಮಾಹಿತಿ ಸಲ್ಲಿಸಲಾಗಿದೆ) |
| ಇ) | ಇಂತಹ ಸಂಘ ಸಂಸ್ಥೆಗಳನ್ನು ನಿಯಂತ್ರಿಸಲು ಸರ್ಕಾರ ಯಾವುದಾದರೂ ಕಾರ್ಯಕ್ರಮಗಳನ್ನು ರೂಪಿಸಿ ಕೊಂಡಿದೆಯೇ; (ವಿವರಗಳನ್ನು ನೀಡುವುದು) | |
| ಈ) | ಇಂತಹ ಸಂಘ ಸಂಸ್ಥೆಗಳ ವಿರುದ್ಧ ಸರ್ಕಾರ ಯಾವುದಾದರೂ ಕ್ರಮಗಳನ್ನು ಕೈಗೊಂಡಿದೆಯೇ, ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ? (ವಿವರ ನೀಡುವುದು) | |

ಹೆಚ್‌ಡಿ 93 ಎಸ್‌ಎಸ್‌ಟಿ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು

## ಅನುಬಂಧ-ಆ

## ಬೆಂಗಳೂರು ನಗರ

| ಪೊಲೀಸ್ ಠಾಣೆ ಹೆಸರು | ಮೊ ಸಂ ಮತ್ತು ಕಲಂ | ವರದಿ ದಿನಾಂಕ | ಪಿರ್ಯಾದುದಾರರ ಹೆಸರು ಮತ್ತು ವಿಳಾಸ | ಆರೋಪಿಯ ಹೆಸರು ಮತ್ತು ವಿಳಾಸ | ಪ್ರಸ್ತುತ ಹಂತ | ಸಂಘಟನೆಯ ಹೆಸರು |
|---|---|---|---|---|---|---|
| ಬೈಯಪ್ಪನಹಳ್ಳಿ | 141/2021 ಕಲಂ 341 353 384 448 ಸಹಿತ 149 ಐಪಿಸಿ | 07.08.2021 | ಡಾ॥ ಅನ್ಸರ್ ಅಹಮದ್ ಡಿಸ್ಟಿಕ್ ಸರ್ಜನ್, ಇಡಿಹೆಚ್ ಆಸ್ಪತ್ರೆ ಹಳೇ ಮದ್ರಾಸ್ ರಸ್ತೆ, ಇಂದಿರಾನಗರ, ಬೆಂಗಳೂರು ನಗರ | ಎ1. ಪ್ರದೀಪ್ ಎನ್ ತಂದೆ ನಟರಾಜ್ ಡಿಎಸ್ 35 ವರ್ಷ, ಸಂ:1011, ಮಲ್ಲಿಕಾರ್ಜುನ ನಿಲಯ ರೇಣುಕಾ ದೇವಸ್ಥಾನದ ಹತ್ತಿರ ಸೋಮಶೇಟ್ಟಿ ಹಳ್ಳಿ, ಚಿಕ್ಕಬಾಣವಾರ ಅಂಚೆ ಬೆಂಗಳೂರು ನಗರ 560090<br>ಎ2. ಬಾಲರಾಜ್<br>ಎ3. ಮಂಜುನಾಥ್<br>ಎ4. ಶ್ರೀನೀಧಿ<br>ಎ5. ವಿಶ್ವನಾಥ್ ರೆಡ್ಡಿ | ತನಿಖೆಯಲ್ಲಿರುತ್ತದೆ | ಜೈಭಾರತ್ ಯುವ ಸೇನೆ |

ಈ ದೂರಿನ ಸಾರಂಶವೇನೆಂದರೆ, ಪಿರ್ಯಾದುದಾರರಾದ ಡಾ॥ ಅನ್ಸರ್ ಅಹಮದ್ ರವರು ಹಳೇ ಮದ್ರಾಸ್ ರಸ್ತೆಯಲ್ಲಿನ ಇ.ಡಿ.ಹೆಚ್ ಆಸ್ಪತ್ರೆಯ ಡಿಸ್ಟಿಕ್ ಸರ್ಜನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ದಿನಾಂಕ: 07.08.2021 ರಂದು ಮದ್ಯಾಹ್ನ 1.15 ಗಂಟೆಯಲ್ಲಿ ಪ್ರದೀಪ್ ಎಂಬಾತನು ಸುಮಾರು 8 ಜನರಗಿಂತ ಹೆಚ್ಚು ಜನರನ್ನು ಕರೆದುಕೊಂಡು ಆಸ್ಪತ್ರೆಯ ಕೊಠಡಿಗೆ ಬಂದು ಅನಧಿಕೃತವಾಗಿ ನುಗ್ಗಿ ತನ್ನ ಶರ್ಟ್ ಬಿಚ್ಚಿಸುವುದಾಗಿ ಹಾಗೂ 6 ತಿಂಗಳೊಳಗೆ ನಿಮ್ಮನ್ನು ಖಾಲಿ ಮಾಡಿಸುತ್ತೇನೆಂದು ಬೆದರಿಸಿ ಆತನು ಮಾತನ್ನು ಕೇಳದಿದ್ದಾಗ ತಾನು ರೋಗಿಯ ಸಂಬಂಧಿಕರ ಬಳಿ ಆಸ್ಪತ್ರೆಯ ಬಿಲ್ ಮೊತ್ತವನ್ನು ಪಾವತಿಸುವಂತೆ ಕೇಳುತ್ತಿದ್ದು, ವಿಡಿಯೋಗಳನ್ನು ತೋರಿಸಿ ಲಾಭ ಕೇಳುತ್ತಿದ್ದೀಯಾ ಎಂದು ಸಾಮಾಜಿಕ ಜಾಲತಾಣದಲ್ಲಿ ಹಾಕುವುದಾಗಿ ಬೆದರಿಕೆ ಹಾಕಿ ಈ ವಿಡಿಯೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಕಬಾರದೆಂದರೆ ಹಣ ಕೊಡಬೇಕೆಂದು ಬೆದರಿಸಿ ತಾನು ಜೈಭಾರತ ಸಂಘಟನೆಯ ಪೇಸ್‌ಬುಕ್‌ನಲ್ಲಿ ಬಿಲ್ ಮೊತ್ತವನ್ನು ಕೇಳುತ್ತಿದ್ದ ವಿಡಿಯೋವನ್ನು ಅಪ್ಲೋಡ್ ಮಾಡಿ ಡಿಲಿಟ್ ಮಾಡಿರುತ್ತಾರೆ ಎಂದು ಕೊಟ್ಟ ದೂರು ಇತ್ಯಾದಿ.

# ಮೈಸೂರು ಜಿಲ್ಲೆ

| ಕ್ರ ಸಂ | ಠಾಣೆ& ಮೊ.ನಂ | ಕೃನಡಿ ಕೃವಡಿ & ಕೃ ನಸ್ಥ | ಫಿರ್ಯಾದಿ | ಆರೋಪಿ | ಸಾರಾಂಶ | ತನಿಖೆಗೆಕಾರಣ |
|---|---|---|---|---|---|---|
| 1. | ನಂಜನಗೂಡು ಪಟ್ಟಣ ಪೊಲೀಸ್ ಠಾಣೆ.ಮೊ.ನಂ 90/2021 ಕಲಂ- 143.353.504 506.r/w 149 IPC | ದಿ:31-08-21 ಸಂಜೆ 5.00 -530 ಗಂಟೆವರೆಗೆ ದಿ:02-09-21 . ಸಂಜೆ 17.50 ಗಂಟೆಸಮಯದಲ್ಲಿ ನಂಜನಗೂಡು ತಾಲ್ಲೂಕು ಕಛೇರಿ ನಂಜನಗೂಡು ಪಟ್ಟಣ | ಶ್ರೀಮತಿ ಮೋಹನ ಕುಮಾರಿ ತಹಶೀಲ್ದಾರ್ ನಂಜನಗೂಡು ತಾಲ್ಲೂಕು ಹಾಲಿ ವಿಳಾಸ ಶಕ್ತಿನಗರ ಮೈಸೂರು ಮೊಬೈಲ್ ನಂ 9008404949 | 1.ನಟರಾಜು ಬಿನ್ಮಾದೇಗೌ ಮರಡಿಹುಂಡಿ ಚಿಕ್ಕಯ್ಯನ ಛತ್ರ ಹೋಬಳಿ ನಂಜನಗೂಡು ತಾಲ್ಲೂಕು 2.ರವಿ ಕೃಷ್ಣ ರೆಡ್ಡಿ ಕೆಆರ್ ಎಸ್ ಪಕ್ಷ ಅಧ್ಯಕ್ಷರು 3 ಇತರೆ 15-20 ಜನರು ಹೆಸರು ವಿಳಾಸ ತಿಳಿದು ಬಂದಿರುವುದಿಲ್ಲ | ದಿನಾಂಕ 31-08-2021 ರಂದು ಅಂದಾಜು ಸಮಯ ಸಂಜೆ 5.00 -5.30 ಗಂಟೆ ಸಮಯದಲ್ಲಿ ನಂಜನಗೂಡು ತಾಲ್ಲೂಕು ಚಿಕ್ಕಯ್ಯನ ಛತ್ರ ಹೋಬಳಿ , ಮರಡಿ ಹುಂಡಿ ಗ್ರಾಮದ ನಟರಾಜು ಬಿನ್ ಲೇಟ್ಮಾದೇಗೌಡ ಎಂಬುವನುತನ್ನಜೊತೆ ಇಬ್ಬರು ವ್ಯಕ್ತಿಗಳನ್ನು ಕರೆದುಕೊಂಡು ಬಂದರುಆ ವ್ಯಕ್ತಿಗಳ ಹೆಸರುನನಗೆ ಗೊತ್ತಿರುವುದಿಲ್ಲ ಆದರೆ ಇಬ್ಬರನ್ನು ನೋಡಿದರೆ ಗುರ್ತಿಸುತ್ತೇನೆ , ಆ ವ್ಯಕ್ತಿಗಳು ಹಳದಿ ಬಣ್ಣದ ಟೀಶರ್ಟನ್ನು ಹಾಗೂ ತಲೆಗೆ ಟೋಪಿಯನ್ನು ಧರಿಸಿದ್ದು ಇರುತ್ತದೆ .ಟೀ ಶರ್ಟಿನ ಮೇಲೆಕೆ ಆರ್ ಎಸ್ ಪಕ್ಷ ಎಂದು ಬರೆದಿತ್ತು . ಆ ಇಬ್ಬರು ವ್ಯಕ್ತಿಗಳು ಏಕಾ ಏಕಿ ನೀನು ನಟ ರಾಜುವಿಗೆ ಸಾಗುವಳಿಚೀಟಿಯನ್ನು ಏಕೇ ಕೊಟ್ಟಿಲ್ಲವೆಂದು ಏರು ಧ್ವನಿಯಲ್ಲಿ ಅವಾಚ್ಯ ಶಬ್ದಗಳಲ್ಲಿ ಕೇಳಿದರು ಆಗ ನಾನು ಎಸಿ ಕಚೇರಿಯಲ್ಲಿ ಸದರಿಯವರ ಅರ್ಜಿವಜಾ ಆಗಿರುತ್ತದೆ. ಆ ಬಗ್ಗೆ ಈಗಾಗಲೇ ನಾವು ನಟರಾಜು ರವರಿಗೆ ಹಿಂಬರಹವನ್ನು ಸಹ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದರು ಸಹ ಏಕಾ ಏಕಿ ನಟರಾಜು ಮತ್ತು ಈ ತನ ಜೊತೆಯಲ್ಲಿದ್ದ ಹಳದಿ ಬಣ್ಣದ ಟೀ ಶರ್ಟ್ ಧರಿಸಿದ್ದ ವ್ಯಕ್ತಿಗಳು ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ನೀನು ಸಾಗುವಳಿಚೀಟಿಯನ್ನು ಕೊಡಲೇ ಬೇಕು ಇಲ್ಲದಿದ್ದರೆ ನಿನ್ನನ್ನುಏನು ಮಾಡುತ್ತೀವಿ ನೋಡು ಎಂದುಬೆದರಿಕೆಯನ್ನು ಹಾಕುತ್ತಾ ಅಷ್ಟರಲ್ಲಿ ಆ ಇಬ್ಬರಲಿಲ್ಲ ವ್ಯಕ್ತಿ ಬೇರೆಯವರನ್ನು ಸನ್ನೆ ಮಾಡಿಕೂಗಲು ನನ್ನ ಕೊಠಡಿ ಸಂಖ್ಯೆ 4ರಲ್ಲಿಗೆ ಸುಮಾರು ಮೂವರು ಮಂದಿ ಹಳದಿಬಣ್ಣದ ಟೀ ಶರ್ಟ್ಹಾಗೂ ತಲೆಗೆಟೋಪಿಯನ್ನು ಹಾಕಿಕೊಂಡು ಟೀ ಶರ್ಟ್ನ ಮೇಲೆ ಕೆ ಆರ್ ಎಸ್ ಪಕ್ಷಎಂದು ನಮೂದಿಸಿದ ಚಿಹ್ನೆ ಇದ್ದ ಬಟ್ಟೆಯನ್ನು ಧರಿಸಿಕೊಂಡಿದ್ದ ಜನರು ಏಕಾಏಕಿ ನನ್ನ ಕೊಠಡಿ ಕಡೆ ಗುಂಪಾಗಿ ಬಂದು ಕಿರುಚಾಡುತ್ತಿದ್ದಾಗ ನಾನು ತಿಳಿ ಹೇಳಲು ಹಾಗೂ ಸದರಿ ವಿಷಯಕ್ಕೆ ಸಂಬಂದಿಸಿದ ಕಡತವನ್ನು ವಿವರಿಸಲು ಮುಂದಾದಾಗ ಅವರು ನನ್ನ ಯಾವುದೇ ಮಾತುಗಳನ್ನು ಕೇಳದೆ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸುವುದಲ್ಲದೆ ಅಶಾಂತಿಯನ್ನು ಉಂಟು ಮಾಡಿರುತ್ತಾರೆ, ಆಗ ನಾನು ತಹಶೀಲ್ದಾರ್ಮೇಡಂ ನವರ ಬಳಿ ಬನ್ನಿ ಎಂದು ಇದಕ್ಕೆ ಸಂಬಂದಪಟ್ಟ ಕಡತದೊಂದಿಗೆ ತಹಶೀಲ್ದಾರ್ ಕೊಠಡಿಗೆ ಹೋದೆನು . ಸದರಿ ಕೊಠಡಿಯೊಳಗೆ ತಹಶೀಲ್ದಾರ್ ರವರ | ಈ ಪ್ರಕರಣದಲ್ಲಿ ಆರೋಪಿಗಳು ದಸ್ತಗಿರಿಯಾಗಬೇಕು & ಕೆಲವು ಸಾಕ್ಷೀದಾರರ ಹೇಳಿಕೆಗಳನ್ನು ದಾಖಲಿಸಿ ಕೊಳ್ಳ ಬೇಕಾಗಿದ್ದು, ಸದರಿ ಪ್ರಕರಣವುತನಿಖಾ ಹಂತದಲ್ಲಿರುತ್ತದೆ. |

| | | | | | | |
|---|---|---|---|---|---|---|
| | | | | | ಅನುಮತಿ ಇಲ್ಲದೆ ಏಕಾ ಏಕಿ ದಬ್ಬಾಳಿಕೆ ಹೆದರಿಕೆಯನ್ನು ಒಡ್ಡಿನಟರಾಜು ಮತ್ತು ಆತನಜೊತೆ ಇದ್ದಇನ್ನಿತರ 15ರಿಂದ 20 ಜನ ಹಳದಿ ಬಣ್ಣದ ಟೀ ಶರ್ಟ್‌ಗೂ ಟೋಪಿ ಧರಿಸಿದ ಟೀಶರ್ಟ್ ನಮೇಲೆ ಕೆಆರ್ ಎಸ್ ಪಕ್ಷ ಎಂಬ ಚಿಹ್ನೆ ಇದ್ದ ಜನರು ಏಕಾಏಕಿ ಬಂದು ನಾವು ಕೆ ಆರ್‌ಎಸ್ಪಕ್ಷದವರು ಎಂದು ಹೇಳುತ್ತಾ ನಾವು ಎಲ್ಲಾ ಸರ್ಕಾರಿಕಛೇರಿಗಳಿಗೂ ತೆರಳಿ ಕಛೇರಿಗಳ ಕಾರ್ಯವೈಖರಿ ಕುರಿತಾಗಿ ಪರಿಶೀಲನೆ ಮಾಡುತ್ತಿದ್ದೇವೆ ಎಂದು ಹೇಳಿರುತ್ತಾರೆ, ಸದರಿ ವಿಷಯಕ್ಕೆ ತಹಶೀಲ್ದಾರ್ ಮೇಡಂ ರವರು ನಿಮ್ಮ ಯಾವುದೇ ಪರಿಶೀಲಯನ್ನು ಲಿಖಿತ ರೂಪದಲ್ಲಿ ಶಾಂತಿಯುತವಾಗಿ ನೀಡಬೇಕೆಂದು ತಿಳಿಸಿದ್ದಾಗಿಯೂ ಏಕಾ ಏಕಿ ದಬ್ಬಾಳಿಕೆಯನ್ನು ಮಾಡುತ್ತಾ ತಹಶೀಲ್ದಾ ರ್ಮೇಡಂ ರವರೊಂದಿಗೂ ಸಹ ವಿನಾ ಕಾರಣ ಕೂಗಾಡಿ ಸಮಸ್ಯೆಯನ್ನು ಕಷ್ಟದೊಂದಿಗೆ ವಿವರಿಸುತ್ತಿದ್ದಾಗಲೂ ಯಾವುದೇ ಗಮನಹರಿಸದೆ ತಹಶೀಲ್ದಾರ್ಮೇಡಂ ರವರೊಂದಿಗೆ ಅಗೌರವದಿಂದ ಕೂಗಾಡುತ್ತಾ ಅವರು ನೀಡುತ್ತಿದ್ದ ವಿವರಣೆಯನ್ನು ಸಹ ಕೇಳಿಸಿಕೊಳ್ಳದೆ ಅವರ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಪಡಿಸಿದಲ್ಲದೆ ಅನುಮತಿ ಇಲ್ಲದೆ ವೀಡಿಯೋ ಚಿತ್ರಿಕರಣವನ್ನು ಮಾಡುತ್ತಾ ಇದನ್ನು ಸಾಮಾಜಿಕಜಾಲತಾಣದಲ್ಲಿ ಹರಿಯಬಿಡುತ್ತೇವೆ ಆಗ ನಿಮಗೆಗೊತ್ತಾಗುತ್ತದೆ ಎಂದು ಅವಾಚ್ಯ ಶಬ್ದಗಳಿಂದ ಬೆದರಿಕೆ ಒಡ್ಡಿರುತ್ತಾರೆ, ಅಷ್ಟರಲ್ಲಿ ತಾಲ್ಲೂಕು ಕಛೇರಿಯ ಸಿಬ್ಬಂದಿಗಳಾದ ಶ್ರೀ ಮಲ್ಲೇಶ್ಡಿ ಗ್ರೂಪ್ನೌಕರರು ಮತ್ತು ಶ್ರೀಶಿವಲಿಂಗಡಿ ಗ್ರೂಪ್ನೌಕರರು ಇವರುಗಳೊಂದಿಗೆ ಇತರೆ ಕಛೇರಿಯ ಸಿಬ್ಬಂದಿಗಳು ಅವರುಗಳನ್ನುಸಮದಾನ ಮಾಡಿಹೊರಗೆಕಳುಹಿಸಿದರು , ಮತ್ತುಈ ಬಗ್ಗೆಮರುದಿನಫೇಸ್ಬುಕ್ಜಾಲತಾಣದಲ್ಲಿವೀಡಿಯೋಹರಿಯಬಿಟ್ಟಿರುವುದನ್ನು ನೋಡಿನನಗೆಮಾನಸಿಕವಾಗಿ ನೋವುಂಟಾಗಿರುತ್ತದೆ. ಮತ್ತುಇದರಿಂದಾಗಿಸರ್ಕಾರಿ ಕಾರ್ಯನಿರ್ವಹಿಸಲುಕಷ್ಟವಾಗಿರುತ್ತದೆಂದುಇದಕ್ಕೆಕಾರಣ ಕರ್ತರಾದಕೆಆರ್ ಎಸ್ಪಕ್ಷ ಎಂದು ಬರೆದಿದ್ದ ಹಳದಿಬಣ್ಣದ ಟೀಶರ್ಟ್‌ಧರಿಸಿದ್ದ ಜನರ ವಿರುದ್ಧಕ್ರಮ ಕೈಗೊಳ್ಳುವಂತೆತಮ್ಮಲ್ಲಿವಿ ನಮ್ರತೆಯಿಂದಕೋರುತ್ತೇನೆ ,<br>ಸದರಿ ಸಿಬ್ಬಂದಿಯ ದೂರು ಅರ್ಜಿಯ ಪ್ರತಿಯನ್ನು ಈ ಪತ್ರದೊಂದಿಗೆ ಅಡಕಗೊಳಿಸಿದೆ, ಈ ಸಂಬಂದ ಶ್ರೀನಿವಾಸ್ ದ್ವಿದ.ಸ. ಇವರು ನೀಡಿರುವ ದೂರಿನಲ್ಲಿ ವಿವರಿಸಿರುವ ಅಂಶಗಳು ಸತ್ಯವಾಗಿರುತ್ತದೆ ದಿನಾಂಕ 31-08-2021 ರಂದು ತಹಶೀಲ್ದಾರ್‌ಗೂ ತಾಲ್ಲೂಕುದಂಡಾಧಿಕಾರಿಯಾದ ನನ್ನ ಕಛೇರಿಗೆ ಬಲವಂತವಾಗಿ ಯಾವುದೇ ಪೂರ್ವಾನುಮತಿ ಇಲ್ಲದೆ ನನ್ನ ಕೊಠಡಿಗೆ ಏಕಾ ಏಕಿ ನುಗ್ಗಿಒಬ್ಬಮಹಿಳಾ ಅಧಿಕಾರಿ ಎಂಬುದನ್ನು ಪರಿಗಣಿಸದೆ ತಮ್ಮನ್ನು ತಾವು ನಾವು ಕೆ ಆರ್‌ಎಸ್ಪಕ್ಷದವರು ಎಂದು ನಮ್ಮ ಗುಂಪಿನ ಮುಖಂಡರವಿ ಕೃಷ್ಣ ರೆಡ್ಡಿ ಎಂದು ಹೇಳುತ್ತಾ ಅಧಿಕಾರಿಯೊಂದಿಗೆ ಮಾತನಾಡುವಾಗ ಇರಬೇಕಾದ ಸೌಜನ್ಯವು ಇಲ್ಲದೆ ನನ್ನೊಡನೆ ಏರುಧ್ವನಿಯಲ್ಲಿ ಮಾತನಾಡುತ್ತಾ ಅಗೌರವದೊಂದಿಗೆ ವರ್ತಿಸಿರುತ್ತಾರೆ. ಈ ಕಛೇರಿಯಎಲ್ಲಾ ಕೊಠಡಿಗಳಿಗೆ ಯಾವುದೇ ಪೂರ್ವಾನುಮತಿ ಇಲ್ಲದೆ ಏಕಾಏಕಿನುಗ್ಗಿ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಸರ್ಕಾರಿನೌಕರರಗುರ್ತಿನ ಚೀಟಿಧರಿಸಿಲ್ಲವೇಕೆ ? ಮಾಸ್ಕ್ಯಾಕೇಧರಿಸಿಲ್ಲ ,ಮತ್ತುಹಾಜರಾತಿ ಎಲ್ಲಿದೆ ಹಾಗೂ ಕಡತದಡ್ರೈರಿ ಎಲ್ಲಿವೆ? ಎಂಬ ಅಸಂಬದ್ದ ವಾದ | |

| | | | | | | |
|---|---|---|---|---|---|---|
| | | | | | ಪ್ರಶ್ನೆಗಳನ್ನು ಕೇಳುತ್ತಾ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಮಾನಸಿಕ ಕಿರುಕುಳವನ್ನು ನೀಡಿರುವುದಾಗಿ ಈ ಕಛೇರಿಯ ಸಿಬ್ಬಂದಿಗಳು ತಿಳಿಸಿರುತ್ತಾರೆ , ಹಾಗೂ ಕಛೇರಿಯಲ್ಲಿ ಕರ್ತವ್ಯದ ವೇಳೆಯಲ್ಲಿ ಸಾರ್ವಜನಿಕ ಕೆಲಸ ನಿರ್ವಹಿಸಲು ಅಡ್ಡಿಪಡಿಸಿರುತ್ತಾರೆ ಈ ಕುರಿತಾಗಿ ಇಂದು ಕಛೇರಿಗೆ ಬೆಳಿಗ್ಗ 9.30 ಗಂಟೆಗೆ ನಾನು ಬಂದಾಗ ಕಛೇರಿಯಲ್ಲಿ ನೆನ್ನೆ ನಡೆದಿರುವ ಈ ಘಟನೆಯನ್ನು ವೀಡಿಯೋ ಚಿತ್ರೀಕರಣ ಮಾಡಿ ಯಾರ ಅನುಮತಿಯು ಇಲ್ಲದೆ ಶಾಂತಿಯು ತವಾತಾವರಣ ಕದಡುವ ಉದ್ದೇಶದಿಂದ ಅದನ್ನು ಫೇಸ್ಬುಕ್ಸಾಮಾಜಿಕ ಜಾಲತಾಣದಲ್ಲಿ ಬಿತ್ತರಿಸಿರುತ್ತಾರೆ ಎಂಬ ವಿಷಯನನ್ನ ಗಮನಕ್ಕೆಬಂದಿರುತ್ತದೆ ಹಾಗೂ ವ್ಯಾಟ್ಸಾಪ್ಮೂಲಕ , ನನಗೆ ಮಾಹಿತಿ ಬಂದಿರುತ್ತದೆ. ಹೀಗೆಯಾವುದೇ ಅನುಮತಿ ಇಲ್ಲದೆ ಏಕಾಏಕಿ ಸರ್ಕಾರಿ ಕಛೇರಿಗೆನುಗ್ಗಿ ಯಾವುದೇಅನುಮತಿ ಇಲ್ಲದೆಸರ್ಕಾರಿ ಕಛೇರಿ ಕೆಲಸಗಳಿಗೆ ಅಡ್ಡಿಪಡಿಸಿರುತ್ತಾರೆ , ಇದರಿಂದಾಗಿ ನನ್ನ ಆಧೀನಸಿಬ್ಬಂದಿಯವರು ಕರ್ತವ್ಯನಿರ್ವಹಿಸುವಲ್ಲಿ ಮಾನಸಿಕವಾಗಿ ನೊಂದಿದ್ದು ಅಲ್ಲದೆ ಈ ಬಗ್ಗ ವೀಡಿಯೋ ಚಿತ್ರೀಕರಣ ಮಾಡಿ ಫೇಸ್ಬುಕ್ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿರುವುದರಿಂದ ಸಾರ್ವಜನಿಕರಲ್ಲಿ ನನ್ನ ಕಛೇರಿ ಮತ್ತು ಸಿಬ್ಬಂದಿಗಳ ಬಗ್ಗ ತಪ್ಪು ಗ್ರಹಿಕೆ ಉಂಟಾಗಲು ಕಾರಣರಾಗಿರುತ್ತಾರೆ, ಕಛೇರಿಯಎಲ್ಲಾ ಶಿರಾಸ್ತೆದಾರರು ಮತ್ತು ಗುಮಾಸ್ತರು , ಮತ್ತು ಇತರೆ ಎಲ್ಲಾ ಸಿಬ್ಬಂದಿ ಹೆದರಿಕೆಯಿಂದ ಕೆಲಸನಿರ್ವಹಿಸಲು ಹಿಂಜರಿಯುತ್ತಿದ್ದಾರೆ , ಈ ಪ್ರಯುಕ್ತ ಮಾನ್ಯರು ನನ್ನ ಫಿಯಾದಿಯವನ್ನು ಕೂಲಕುಂಷವಾಗಿ ಪರಿಶೀಲಿಸಿ ಇಂತಹ ಸಮಾಜಘಾತುಕ ಆರೋಪಿತರ ವಿರುದ್ದ ಯೋಗ್ಯ ರೀತ್ಯಾ ಕಠಿಣ ಕಾನೂನಿನ ಕ್ರಮ ಕೈಗೊಳ್ಳಬೇಕೆಂದು ವಿನಂತಿಸುತ್ತೇನೆ ,<br>ಈ ವಿಷಯವನ್ನು ನಮ್ಮ ಮೇಲಾಧಿಕಾರಿಯವರ ಗಮನಕ್ಕೆ ತಂದು ಅನುಮತಿಯನ್ನು ಪಡೆದು ಸದರಿ ದೂರನ್ನುಈ ಕಛೇರಿಯ ಸಿಬ್ಬಂದಿಯವರಾದ ಶ್ರೀಶ್ರೀನಾಥ್ ಆರ್ ,ಕಾರ್ಯ ನಿರ್ವಾಹಕ ಶಿರಾಸ್ತೆದಾರರು ತಾಲ್ಲೂಕು ಕಛೇರಿ ನಂಜನಗೂಡುರವರ ಮೂಲಕ ಪೊಲೀಸ್ ಠಾಣೆಗೆ ಕಳುಹಿಸಿರುತ್ತೇನೆಂದು ಕಳುಹಿಸಿ ಕೊಟ್ಟ ಕಂಪ್ಯೂಟರ್ಮುದ್ರಿತ ದೂರಿನ ಮೇರೆಗೆ ಈ ಪ್ರವವರದಿ | |

<u>ದಾವಣಗೆರೆ ಜಿಲ್ಲೆ</u>

| ಕ್ರ. ಸಂ | ಠಾಣೆ ಮತ್ತು ಗುನ್ನೆ ನಂಬರ್ | ವರದಿ ದಿನಾಂಕ | ಫಿರ್ಯಾದಿ | ಆರೋಪಿ | ಕೇಸಿನ ಸಾರಾಂಶ | ಪ್ರಕರಣದ ಪ್ರಸ್ತುತ ಹಂತ |
|---|---|---|---|---|---|---|
| 01 | ಕೆಕೆಟಿಜೆ ನಗರ ಪೊಲೀಸ್ ಠಾಣೆ ಗುನ್ನೆ ನಂ. 121/2021 ಕಲಂ 323. 384. 504.506 ರೆ/ವಿ 34 ಐಪಿಸಿ | ದಿ: 13-07-2021 ರಂದು ಮದ್ಯಾಹ್ನ 1-00 ಗಂಟೆಗೆ | ಶ್ರೀ ಕಿರಣ್ ಕುಮಾರ, ಖಾಸಗಿ ವಿಮೆ ಕಂಪನಿಯಲ್ಲಿ ಮೇನೇಜರ್ ಕೆಲಸ, ವಾಸ ಡಿಸಿಎಂ ಟೌನ್‌ಷಿಪ್ ದಾವಣಗೆರೆ | 1) ಅಭಿ @ ಅವಿನಾಶ, ಕರುನಾಡ ಸಮರ ಸೇನೆ ರಾಜ್ಯಾಧ್ಯಕ್ಷ, 2) ಮಾಲ 3) ಅರವಿಂದಾಕ್ಷ ಹಾಗೂ 4) ಭೋಜರಾಜ | ದಿ: 13-07-2021 ರಂದು ಮದ್ಯಾಹ್ನ 1-00 ಗಂಟೆಗೆ ಫಿರ್ಯಾದಿ ಶ್ರೀ ಕಿರಣ್ ಕುಮಾರ, ಖಾಸಗಿ ವಿಮೆ ಕಂಪನಿಯಲ್ಲಿ ಮೇನೇಜರ್ ಕೆಲಸ, ವಾಸ ಡಿಸಿಎಂ ಟೌನ್‌ಷಿಪ್ ದಾವಣಗೆರೆ ಇವರನ್ನು ಆರೋಪಿತರಾದ 1) ಅಭಿ @ ಅವಿನಾಶ, ಕರುನಾಡ ಸಮರ ಸೇನೆ ರಾಜ್ಯಾಧ್ಯಕ್ಷ, 2) ಮಾಲ 3) ಅರವಿಂದಾಕ್ಷ ಹಾಗೂ 4) ಭೋಜರಾಜ ಇವರುಗಳು ದೂರವಾಣಿ ಕರೆಮಾಡಿ ಮಾಲ ನಾಗರಾಜ್‌ಇವರ ಮನೆಗೆ ಕರೆಸಿ ನಿಶಾ ಇವಳನ್ನು ನೀವು ಕೆಟ್ಟದಾಗಿ ಬಳಸಿಕೊಂಡಿದ್ದೀರಿ ಎಂತಾ ಹಲ್ಲೆ ಮಾಡಿ ಅವಳ ಮದುವೆ ಖರ್ಚಿಗೆ ಹಣ ಕೊಟ್ಟು ಸರಿಮಾಡಿಕೊಳ್ಳಿ ಇಲ್ಲದಿದ್ದರೆ ರೇಪ್‌ಕೇಸ್ ಹಾಕಿಸಿ ಜೈಲಿಗೆ ಕಳುಹಿಸಿ ಮರ್ಯಾದೆ ತೆಗೆಯುತ್ತೇವೆ ಎಂತಾ ಹೆದರಿಸಿ ಹಣ ಈಗ ಇಲ್ಲ ಎಂತಾ ಹೇಳಿದ್ದು ದೌರ್ಜನ್ಯದಿಂದ ಮನೆಯಿಂದ ಖಾಲಿ ಚೆಕ್ಕುಗಳನ್ನು ತರಿಸಿ ಸಹಿ ಪಡೆದಿರುತ್ತಾರೆ ಎಂತಾ ಇದ್ದ ಮೇರೆಗೆ | ತನಿಖೆ ಹಂತದಲ್ಲಿ ಇರುತ್ತದೆ. |
| 02 | ಕೆಕೆಟಿಜೆ ನಗರ ಪೊಲೀಸ್ ಠಾಣೆ ಗುನ್ನೆ ನಂ. 142/2021 ಕಲಂ 353. 384. 386 ರೆ/ವಿ 34 ಐಪಿಸಿ | ದಿ: 31/07/2021 ರಂಧು ಬೆಳಿಗ್ಗೆ 9-30 ಗಂಟೆಗೆ | ಪಿಸಿ-163 | ಕೆಆರ್‌ಎಸ್ ಪಕ್ಷದ ಮಾಲತೇಶ, ಶಶಿಕುಮಾರ ಹಾಗೂ ಅಭಿಷೇಕ್ | ದಿ: 31/07/2021 ರಂಧು ಬೆಳಿಗ್ಗೆ 9-30 ಗಂಟೆಗೆ ಫಿರ್ಯಾದಿ ಪಿಸಿ-163 ಇವರು ಚೀತಾ-11 ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ದಾವಣಗೆರೆ ನಿಟ್ಟುವಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಬಳಿ ಸಾರ್ವಜನಿಕರು ವ್ಯಾಕ್ಸಿನ್ ಪಡೆಯುವ ಸಲುವಾಗಿ ಹೆಚ್ಚಿನ ಗುಂಪು ಸೇರಿದ್ದಾರೆ ಎಂತಾ ಮಾಹಿತಿ ಬಂದು ಠಾಣೆಯಿಂದ ಸಿಬ್ಬಂದಿಯನ್ನು ಕರೆಸಿಕೊಂಡು ಸಾರ್ವಜನಿಕರನ್ನು ಸಾಲಾಗಿ ನಿಲ್ಲಿಸುತ್ತಿದ್ದು ಕೆಆರ್‌ಎಸ್ ಪಕ್ಷದ 3 ಜನರು ಫೇಸ್‌ಬುಕ್ ಲೈವ್ ಮಾಡುತ್ತಾ ಸಾರ್ವಜನಿಕರಿಗೆ ಪ್ರಚೋದಿಸುತ್ತಿದ್ದು ಏಕೆ ಈ ರೀತಿ ಪ್ರಚೋದಿಸುತ್ತಿದ್ದೀರ ಎಂತಾ ಕೇಳಿದ್ದಕ್ಕೆ ಅವಾಚ್ಯವಾಗಿ ಮಾತನಾಡಿ ಸಮವಸ್ತ್ರ ಹಿಡಿದು ಎಳೆದಾಡಿರುತ್ತಾರೆ | ತನಿಖಾ ಹಂತದಲ್ಲಿ ಇರುತ್ತವೆ. |

| | | | | | | |
|---|---|---|---|---|---|---|
| | | | | | ಸದರಿಯವರಿಗೆ ಠಾಣೆಗೆ ಕರೆತಂದು 107 ಸಿಆರ್‌ಪಿಸಿ ರೀತ್ಯ ಭದ್ರತಾ ಪ್ರಕರಣ ದಾಖಲಿಸಲಾಗಿರುತ್ತದೆ ನಂತರ ದಿ: 06-08-2021 ರಂದು ಠಾಣೆಗೆ ಬರುತ್ತಿರುವ ವೇಳೆ ಅದೇ 3 ಜನ ವೀಡಿಯೋ ತೋರಿಸಿ 30000/- ಕೊಡಬೇಕು ಇಲ್ಲದಿದ್ದರೆ ಕಂಪ್ಲೇಂಟ್ ಕೊಟ್ಟು ಕೆಲಸ ಕಳೆಯುತ್ತೇವೆ ಎಂದು ಬೆದರಿಕೆ ಹಾಡಿರುತ್ತಾರೆಂದು ಇದ್ದ ಮೇರೆಗೆ | |
| 03 | ಬಬಸವ ನಗರ ಪೊಲೀಸ್ ಠಾಣೆ ಗುನ್ನೆ ನಂ 63/2021 ಕಲಂ 153, 505 (2) ರೆ/ವಿ 149 ಐಪಿಸಿ | ದಿನಾಂಕ:-24-08-2021 ರಂದು ಮದ್ಯಾಹ್ನ 12-30 | ಶ್ರೀ ಓಬಳೇಶ್ ನಾಯ್ಕ್ ಎಎಸ್‌ಐ | ಕೆಆರ್‌ಎಸ್ ಪಕ್ಷದ ರಘು ಜಾಣಗೆರೆ, ಮಂಜುನಾಥ ಹಳ್ಳಿಕೇರಿ, ಮಾಲತೇಶ್, ಶಿವಕುಮಾರ್ ಮತ್ತು ಅಭಿಷೇಕ್ ಹಾಗೂ ಇತರೆ 08-10 | ದಿನಾಂಕ:-24-08-2021 ರಂದು ಮದ್ಯಾಹ್ನ 12-30 ಸುಮಾರಿಗೆ ಕೆಆರ್‌ಎಸ್ ಪಕ್ಷದ ರಘು ಜಾಣಗೆರೆ, ಮಂಜುನಾಥ ಹಳ್ಳಿಕೇರಿ, ಮಾಲತೇಶ್, ಶಿವಕುಮಾರ್ ಮತ್ತು ಅಭಿಷೇಕ್ ಹಾಗೂ ಇತರೆ 08-10 ಜನರೊಂದಿಗೆ ಜಿಲ್ಲಾ ಪೊಲೀಸ್ ಕಚೇರಿಗೆ ಬಂದು, ಪ್ರಚೋದನಾಕಾರಿಯಾದ ಶಬ್ದಗಳನ್ನು ಬಳಸಿ, ಸಾರ್ವಜನಿಕರ ಹಾಗೂ ಪೊಲೀಸರ ಮಧ್ಯೆ ವೈಮನಸ್ಸುಂಟಾಗುವ ರೀತಿಯಲ್ಲಿ ಹೇಳಿಕೆಗಳನ್ನು ನೀಡುತ್ತಾ, ವಿಡಿಯೋ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದರ ಮೇರೆಗೆ ಶ್ರೀ ಓಬಳೇಶ್‌ನಾಯ್ಕ್ ಎಎಸ್‌ಐ ಇವರು ನೀಡಿದ ದೂರಿನ ಮೇರೆಗೆ | ತನಿಖಾ ಹಂತದಲ್ಲಿ ಇರುತ್ತವೆ. |
| 04 | ನ್ಯಾಮತಿ ಠಾಣೆ ಗುನ್ನೆ ಸಂಖ್ಯೆ 102/2019 ಕಲಂ143, 504, 353, 506, 149 ಐಪಿಸಿ 1989 (ಗ/- 3(1)(ಡಿ),3(1)(),3(2)(ತಿ-ಚಿ)) ಖಅ ಂಟಆ ಖಿಉಾಇ ಖಖಿ (ಕಖಇಗಿಇಓಖಿಖಔಓ ಔಈ ಂಖಿಖಿಖಔಅಖಖಿಖಇಖ) ಂಅಖಿ | 24-07-2019 | ಬಸವರಾಜ್ ಬಿ.ಕೆ. ಉಪನ್ಯಾಸಕರು, ಎ.ಡಿ ಜನಾಂಗ 38 ವರ್ಷ, ಸರ್ಕಾರಿ ಪ್ರಥಮ ದರ್ಜೆ ಕಾಲೇಜ್, ನ್ಯಾಮತಿ | ವಿನಯ್ ಕನ್ನಡ ರಕ್ಷಣಾ ವೇದಿಕೆ ಅಧ್ಯಕ್ಷ, ನ್ಯಾಮತಿ | ದಿನಾಂಕ:24/07/2019 ರಂದು ರಾತ್ರಿ 08.30 ಗಂಟೆಗೆ ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ ದಿನಾಂಕ:09/07/2019 ರಂದು 01.20 ಪಿಎಂನಲ್ಲಿ ವಿನಯ್ ಎಂಬುವರು ನನ್ನ ಮೊಬೈಲ್ ಗೆ ಕರೆಮಾಡಿ ನಾನು ನ್ಯಾಮತಿ ತಾಲ್ಲೂಕು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷನೆಂದು ನಿಮ್ಮ ವಿರುದ್ದ ಹೋರಾಟ ಮತ್ತು ಪ್ರತಿಭಟನೆ ಮಾಡುತ್ತೇವೆ ಎಂದು ಬೆದರಿಕೆ ಒಡ್ಡಿದ್ದಾರೆ, ಬಗೆಹರಿಯಬೇಕಾದರೆ ನೀವು ನನ್ನ ಬಳಿ ಬಂದು ಕೂತು ಸೂಕ್ಷ್ಮವಾಗಿ ಮಾತನಾಡಿ ಬಗೆಹರಿಸಿಕೊಳ್ಳಿ ಎಂದಿದ್ದಾರೆ, ಅಲ್ಲದೆ ನನ್ನ ಸ್ನೇಹಿತನ ಮೊಬೈಲ್ ಗೆ ಕರೆ ಮಾಡಿ ಕೂತು | ಸದರಿ ಪ್ರಕರಣ ವಿಚಾರಣೆಯಲಿದ್ದು ಮುದ್ದತ್ ದಿನಾಂಕ 14-09-2021 ರಂದು ಇರುತ್ತದೆ. |

| | | | | | | | |
|---|---|---|---|---|---|---|---|
| | | | | | | ಮಾಡನಾಡಿ ಬಗೆಹರಿಸಿಕೊಳ್ಳಲು ಒತ್ತಾಯಿಸಿದ್ದಾರೆ, ಸದರಿ ದಿನಾಂಕದಂದು ಸಂಜೆ 05.30 ಗಂಟೆ ಯ ಸಮಯದಲ್ಲಿ ನ್ಯಾಮತಿ ಹಳೇ ಪ್ರವಾಸಿ ಮಂದಿರ ಮುಂಭಾಗ ನನ್ನ ಜಾತಿಯ ಹೆಸರನ್ನು ಕೇಳಿದ ವಿನಯ್ ಅವರು ಜಾತಿ ನಿಂದನೆ ಮಾಡಿ ಬೈದರು ನಿನ್ನ ವಿರುದ್ಧ ಹೋರಾಟ ನಿಲ್ಲಿಸಬೇಕಾದರೆ ನನಗೆ ಹತ್ತುಲಕ್ಷ ರೂಗಳನ್ನು ನಗದಾಗಿ ಕೊಡಬೇಕೆಂದು ಬೇಡಿಕೆ ಇಟ್ಟಿದ್ದಾರೆ ಇದಕ್ಕೆ ನಾನು ಬಡವ ದಲಿತ, ಕರ್ತವ್ಯ ನಿರ್ವಹಿಸಲು ಬಿಡುವುದಿಲ್ಲವೆಂದು ಜೀವಬೆದರಿಕೆ ಹಾಕಿ ಸಾರ್ವಜನಿಕವಾಗಿ ನನ್ನನ್ನು ಅವಮಾನಿಸಿ ತೆಜೋವದೆ ಉಂಟುಮಾಡಿ ಮಾನಸಿಕ ಕಿರುಕುಳ ನೀಡಿದ್ದಲ್ಲದೆ ಕರ್ತವ್ಯ ನಿರ್ವಹಿಸಲು ಚ್ಯುತಿ ಉಂಟುಮಾಡಿದ್ದಾರೆ. ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಿ ಅಂತ ಇದ್ದ ಮೇರೆಗೆ. | |

# ಬಳ್ಳಾರಿ ಜಿಲ್ಲೆ

| ಕ್ರ. ಸಂ. | ಪೊಲೀಸ್ ಠಾಣೆ | ಗುನ್ನೆ ನಂ ಮತ್ತು ಕಲಂ. | ಫಿರ್ಯಾದಿದಾರರ ವಿವರ | ಆರೋಪಿತರ ಹೆಸರು ವಿಳಾಸ | ಪ್ರಕರಣದ ಸಂಕ್ಷಿಪ್ತ ಸಾರಾಂಶ | ಪ್ರಕರಣದ ಪ್ರಸ್ತುತ ಹಂತ |
|---|---|---|---|---|---|---|
| 1. | ಕೂಡ್ಲಿಗಿ | 98/2021 ಕಲಂ 3 ಪ್ರಿವೆನ್ಷನ್ ಆಫ್ ಪಬ್ಲಿಕ್ ಪ್ರಾಪರ್ಟಿ ಡ್ಯಾಮೇಜ್ ಯಾಕ್ಟ್, ಕಲಂ.4, ಪ್ರಾಹಿಬಿಷನ್ ಆಫ್ ವೈಲೆನ್ಸ್ ಅಗನೆಷ್ಟ್ ಮೆಡಿಕಲ್ ಸರ್ವಿಸ್ ಪರ್ಸನಲ್ & ಡ್ಯಾಮೇಜ್ ಆಫ್ ಪ್ರಾಪರ್ಟಿ ಯಾಕ್ಟ್, ಕಲಂ.5(1) ಎಪಿಡಮಿಕ್ ಡಿಸೀಜ್ ಯಾಕ್ಟ್, ಹಾಗೂ ಕಲಂ.448,353 ಐಪಿಸಿ | ಅರುಣ್‌ಕುಮಾರ ಎನ್.ಎಸ್. ವೈಧ್ಯಾಧಿಕಾರಿಗಳು ಪ್ರಾಥಮಿಕ ಆರೋಗ್ಯಕೇಂದ್ರ ಹನಸಿ ಗ್ರಾಮ ಹೆಚ್.ಬಿ. ಹಳ್ಳಿ ತಾಲೂಕು ಬಳ್ಳಾರಿ ಜಿಲ್ಲೆ | ಸಿ.ಎಂ. ಮಂಜುನಾಥ ತಂದೆ ಲೇಟ್.ಸಿ.ಎಂ. ವೀರಭದ್ರಯ್ಯ ವಾಸ: ಹನಸಿ ಗ್ರಾಮ, ಹೆಚ್.ಬಿ.ಹಳ್ಳಿ ತಾಲ್ಲೂಕು ಬಳ್ಳಾರಿ ಜಿಲ್ಲೆ. | ದಿನಾಂಕ 16–05–2021 ರಂದು ಬೆಳಿಗ್ಗೆ 10–30 ಗಂಟೆಗೆ ಫಿರ್ಯಾದಿ ದಾರರು ತಮ್ಮ ಸಿಬ್ಬಂದಿಯೊಂದಿಗೆ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಆರೋಪಿತನು ಫಿರ್ಯಾದಿ ದಾರರಿಗೆ ಏನು ಕೆಲಸ ಮಾಡುತ್ತೀಯ ಸೂಳೆ ಮಗನೆ ನಿಂದೆಲ್ಲಾ ನನಗೆ ಗೊತ್ತು ನಾನು ಮಾನವ ಹಕ್ಕುಳಗ ಆಯೋಗದ ಅಧ್ಯಕ್ಷನಿದ್ದೇನೆ ಸರ್ಕಾರದ ಪ್ರಭಾವಿ ವ್ಯಕ್ತಿಗಳು ಹಾಗೂ ರಾಜ್ಯ ಮಟ್ಟದ ಅಧಿಕಾರಿಗಳ ಪರಿಚಯವಿದ್ದು 24 ಗಂಟೆಗಳಲ್ಲಿ ನಿನ್ನನ್ನು ಎಲ್ಲಿಗೆ ಬೇಕಾದರೂ ಟ್ರಾನ್ಸ್‌ಫರ್ ಮಾಡಿಸಿ ಅಲ್ಲಿ ನಿನಗೆ ತೊಂದರೆ ಕೊಟ್ಟು ಸಸ್ಪೆಂಡ್ ಮಾಡಿಸಿ ನೀವು ಎಲ್ಲಿಯೂ ಕೆಲಸ ಮಾಡದಂತೆ ಮಾಡಿಸಿಬಿಡುತ್ತೇನೆ ನೀನು ಇಲ್ಲಿ ಕೆಲಸ ಮಾಡಬೇಕೆಂದರೆ ನನಗೆ ಪ್ರತಿ ತಿಂಗಳು ಹಣ ಕೊಡಬೇಕು ಇಲ್ಲವೆಂದರೆ ನೀನು ಟ್ರಾನ್ಸ್‌ಫರ್ ಮಾಡಿಕೊಂಡು ಹೋಗಲೇ ಸೂಳೆ ಮಗನೆ ಅಂತಾ ದುರ್ಭಾಷೆ ಗಳಿಂದ ಬೈದು ಟೇಬಲ್ ಗುದ್ದಿ ಗ್ಲಾಸ್ ಒಡೆದ ಬಗ್ಗೆ ದೂರು | ಹೆಚ್.ಬಿ.ಹಳ್ಳಿ ಸಿ.ಜೆ.& ಜೆ.ಎಂ.ಎಫ್.ಸಿ. ನ್ಯಾಯಾಲದ ಸಿಸಿ ನಂ.159/2021 ನೇದ್ದರಲ್ಲಿ ದಿನಾಂಕ 24–09–2021 ರಂದು ಆರೋಪಿತನ ಹಾಜರಾತಿಗಾಗಿ ವಾಯಿದೆ ಇರುತ್ತದೆ. |